ಮಾಡಿಸಿದರು. ಅವರಿಬ್ಬರೂ ಪರಸ್ಪರ ಚರ್ಚಿಸಿ ಯಾವುದೋ ಒಂದು ಸಂಕಲ್ಪ ಮಾಡಿಕೊಂಡಂತೆ ಹೊರಟುಹೋದರು. ಅದರ ಮುಂದಿನ ವಾರಕ್ಕೆ ಜೊತೆಗೊಂದಿಷ್ಟು ಜನರನ್ನೂ ಕರೆತಂದಿದ್ದರು. ಬಹುಶಃ ಇವರೇ ಅವತ್ತು ರಾತ್ರಿ ಕಂದೀಲು, ಕಂದಲಿ, ಕುಡುಗೋಲು ಹಿಡಿದುಕೊಂಡು ಅಟ್ಟಿಸಿಕೊಂಡು ಬಂದವರಿರಬೇಕು. ನನ್ನ ಸುತ್ತಲೂ ಮಣ್ಣನ್ನು ಸ್ವಚ್ಛಗೊಳಿಸಿದರು. ಪಕ್ಕಕ್ಕೇ ಒಂದು ಗುಂಡಿ ತೋಡಿ ತಾವು ಹಿಡಿದುಕೊಂಡು ತಂದಿದ್ದ ಬೇವಿನ ಮರವನ್ನು ನೆಟ್ಟರು. ಬಿಂದಿಗೆ ತುಂಬ ನೀರು ಹೊಯ್ದು ನನ್ನ ಬುಡವನ್ನೆಲ್ಲ ತೊಳೆದು ಹೊಸ ಪಂಚೆ ಶಲ್ಯ ತೊಡಿಸಿದರು. ಹೊಸ ಬೇವಿನ ಮರಕ್ಕೂ ಸೀರೆ ಕುಪ್ಪಸ ಉಡಿಸಿದರು. ಎರಡೂ ಮರಗಳನ್ನು ಸೇರಿಸಿ ದಾರ ಬಿಗಿದು ತಾವೇ ತಾಳಿ ಕಟ್ಟಿ ನಮ್ಮಿಬ್ಬರಿಗೂ ಮದುವೆ ಮಾಡಿಸಿ, ಬಂದವರಿಗೆಲ್ಲ ಊಟ ಹಾಕಿಸಿ, ತಮ್ಮ ಋಣವನ್ನು ತೀರಿಸಿಕೊಂಡರು. ಇನ್ನು ನಾನು ನನ್ನ ಹೆಂಡತಿಯ ಜೊತೆ ಸಹಬಾಳ್ವೆ ನಡೆಸಬೇಕಂತೆ!

ಕಾಳಿಂಗ ಮತ್ತು ತುಂಗಾ ಅವರಿಗೆ ಅದೇಕೋ ನನ್ನ ಮಡಿಲೇ ಆಪ್ಯಾಯವೆನಿಸಿರಬೇಕು. ಅಮರಾವತಿಯ ಸಹವಾಸವೇ ಬೇಡವೆಂದು ನನ್ನ ಪಕ್ಕದಲ್ಲಿಯೇ ಇರಬೇಕೆಂದು ಬಯಸಿ ಮನೆ ಕಟ್ಟಿಕೊಳ್ಳಲು ಬಂದರು. ಯಾರು ಎಷ್ಟು ಬೇಕೋ ಅಷ್ಟು ಉದ್ದಅಗಲಕ್ಕೆ ಬೇಲಿ ಹಾಕಿಕೊಳ್ಳಬಹುದಿತ್ತು. ಅಷ್ಟಗಲವನ್ನು ಉತ್ತುಬಿತ್ತು ಮಾಡಬಹುದಿತ್ತು. ಸದ್ಯಕ್ಕೆ ಒಂದು ಹುಲ್ಲಿನ ಗುಡಿಸಲಿನಂಥದ್ದೊಂದನ್ನು ಕಟ್ಟಿಕೊಂಡು ವಾಸಕ್ಕೆ ಬಂದೇಬಿಟ್ಟರು. ಬಂದವರು ಒಂದು ಹಸುವನ್ನೂ ತಂದಿದ್ದರು ತನ್ನ ಮಗುವಿನ ಕರಾವಿಗೆ ಬೇಕೆಂದು.

ಆ ಹಸು ಕರು ಹಾಕಿ, ಅದು ಮತ್ತೆ ಕರು ಹಾಕಿ, ಹೀಗೆ ಇಪ್ಪತ್ತರಿಂದ ಮೂವತ್ತಕ್ಕೆ ಏರಿಬಿಟ್ಟವು. ಸಮೃದ್ಧವಾದ ಕಾಡು ಇದ್ದುದರಿಂದ ಅವುಗಳ ಮೇವಿಗೆ ಯಾವುದೇ ಕಷ್ಟವಿರದೇ ತಮ್ಮ ಪಾಡಿಗೆ ತಾವು ಬೆಳೆದುಕೊಂಡುಬಿಟ್ಟಿದ್ದವು. ವರ್ಷದ ಆರು ತಿಂಗಳೂ ಧೋ... ಎಂದು ಸುರಿಯುವ ಮಳೆಯಿಂದ ಅವುಗಳ ರಕ್ಷಣೆಗೆ ಬೇಕೆಂದು ಒಂದು ಕೊಟ್ಟಿಗೆಯನ್ನೂ ಕಟ್ಟಿಸಿದ. ಕೊಟ್ಟಿಗೆಗಳೆಂದರೆ ಹೆಚ್ಚುವರಿಯಾಗಿ ಏನನ್ನೂ ಕೊಂಡು ತರಬೇಕಿರಲಿಲ್ಲ. ಎಲ್ಲವೂ ಈ ಕಾಡಿನಲ್ಲೇ ಸಿಗುತ್ತಿತ್ತು. ಮರಮುಟ್ಟುಗಳನ್ನು ಕಡಿದುತಂದು, ಗುಂಡಿ ತೆಗೆದು ಅವುಗಳನ್ನು ನೆಟ್ಟು ಕೊಟ್ಟಿಗೆಯಂಥ ಆಕಾರವನ್ನು ರಚಿಸಬೇಕಿತ್ತಷ್ಟೇ.

ತನ್ನ ಸಹಾಯಕ್ಕೆಂದು ಕೆಲವು ಗೆಳೆಯರನ್ನು ಕರೆತಂದಿದ್ದ. ಏಕೆಂದರೆ ಆಗ ಈಗಿನಂತೆ ಕೂಲಿ ಆಳುಗಳು ಸಿಗುತ್ತಿರಲಿಲ್ಲ. ಅವರುಗಳೆಲ್ಲ ಕಾಡಿನೊಳಕ್ಕೆ ಹೋಗಿ ಕವಡಿನಂತಹ ಎಂಟು ಅಡಿಯ ಎಂಟು, ಹನ್ನೆರಡು ಅಡಿಯ ನಾಲ್ಕು ಕಂಬಗಳನ್ನು ಕಡಿದುತಂದರು. ಅವುಗಳ ಮೇಲೆ ಅಡ್ಡವಾಗಿ ಹಾಕಲು ಮಧ್ಯದ ಕಂಬಕ್ಕೆ ಮೂರು, ಅಕ್ಕಪಕ್ಕದ ಕಂಬಕ್ಕೆ ಆರು ತೊಲೆಗಳನ್ನು ಕಡಿದುತಂದರು. ಮೂರು ಅಂಕಣದ ಕೊಟ್ಟಿಗೆಯನ್ನು ನಿರ್ಮಿಸಿ, ಅದರ ಮೇಲೆಲ್ಲ ಕಡಿದ ಆ ಮರದ ಸಣ್ಣ ಹರಿಗಳನ್ನೇ ಅಡ್ಡ ಇಟ್ಟು ಆ ಎಲೆಗಳನ್ನೇ ಮೇಲು ಹೊದಿಕೆ ಮಾಡಿ ಆಶ್ರಯ ಮಾಡಿಕೊಟ್ಟರು. ಅವುಗಳಿಗೆ ತಕ್ಕಂತೆ ನೆಲದಲ್ಲಿ ಗೂಟಗಳನ್ನು ಹೂಳಿ, ಹುಲ್ಲು ಹಾಕಲು ಬಿದಿರು ದೆಬ್ಬೆ ಸೀಳಿ ಗೊಂತಿಕೆ ಮಾಡಿ ಹೊರಟುಹೋದರು.

ಇದುವರೆಗೂ ಮರದಡಿ ಅಬ್ಬೇಪಾರಿಯಂತೆ ಮಲಗುತ್ತಿದ್ದ ಹಸುಗಳೆಲ್ಲ ಶಿಸ್ತುಬದ್ಧ ಜೀವನಕ್ಕೆ ಹೊಂದಿಕೊಳ್ಳಲು ಕೆಲವು ದಿನ ತೆಗೆದುಕೊಂಡವು. ಬೆಳಗ್ಗೆ ಎಂಟಕ್ಕೆಲ್ಲ ಹಾಲು ಕರೆದುಕೊಂಡು ಕಾಡಿಗೆ ಬಿಟ್ಟು ಓಡಿಸಿದರೆ, ಸಂಜೆ ನಾಲ್ಕೈದು ಗಂಟೆಗೆಲ್ಲ ಹೊಟ್ಟೆ ತುಂಬಿಸಿಕೊಂಡು ಬಂದು ನನ್ನ ಅಡಿಯಲ್ಲಿ ಸೊಂಪಾಗಿರುತ್ತಿದ್ದ ನೆರಳಲ್ಲಿ ಯದ್ವಾತದ್ವ ಮಲಗಿಬಿಡುತ್ತಿದ್ದಂಥವು, ಕ್ರಮೇಣ ಕೊಟ್ಟಿಗೆಗೆ ಬಂದು ತಮ್ಮ ತಮ್ಮ ನಿಗದಿತ ಜಾಗದಲ್ಲಿ ಮಲಗಲು ಶುರುಮಾಡಿದವು. ಎಲ್ಲ ಹಸುಗಳು ತಮ್ಮ ತಮ್ಮ ಸ್ಥಾನವನ್ನು ಅಲಂಕರಿಸಿದ ಮೇಲೆ ಕಾಳಿಂಗ ಬಂದು ಅವುಗಳನ್ನೆಲ್ಲ ಹಗ್ಗದಲ್ಲಿ ಕಟ್ಟಿಹಾಕುತ್ತಿದ್ದ. ಹಗ್ಗದಿಂದ ಕಟ್ಟದಿದ್ದರೂ ಅವು ತಮ್ಮ ಸ್ಥಳವನ್ನು ಬಿಟ್ಟು ಕದಲದಿರುತ್ತಿದ್ದರೂ, ಬೆದೆಗೆ ಬಂದ ಹಸುಗಳು, ಹೋರಿಗಳು ತಮ್ಮ ಕಾಮದಬ್ಬರದಲ್ಲಿ ಕೊಟ್ಟಿಗೆಯನ್ನೆಲ್ಲ ರಾಡಿ ಎಬ್ಬಿಸಿಬಿಡುತ್ತಿದ್ದವು. ಈ ಕಾಮಕ್ಕೆ ಎಂಥ ಶಕ್ತಿಯಿದೆಯೋ ಗೊತ್ತಿಲ್ಲ. ಪ್ರಾಣಿ, ಪಕ್ಷಿ, ಮನುಷ್ಯ ಯಾರೇ ಆಗಿರಲಿ ಕಾಮದ ಆಲಿಂಗನದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಆಗಿಲ್ಲ. ಪ್ರಾಣಿಗಳು ಬೆದೆಗೆ ಬಂದಾಗ ಮಾತ್ರ ಒಂದೆರಡು ದಿನ ಹಾಗೆ ಹಾರಾಡಿ ಸುಮ್ಮನಾಗುತ್ತಿದ್ದವು. ಆದರೆ ಮನುಷ್ಯರಂತೂ ಈ ಪ್ರಾಣಿಗಳಿಗಿಂತ ಅಸಹ್ಯಕರವಾಗಿ ನಡೆದುಕೊಳ್ಳುತ್ತಾರೆ. ಯೌವನದ ಎಲ್ಲ ಕಾಲವೂ ಅವರು ಬೆದೆಗೆ ಬಂದಂತೇ ಆಡುತ್ತಾರೆ. ಇದರಿಂದಾಗಿ ಅದೆಷ್ಟು ಅತ್ಯಾಚಾರಅನಾಚಾರಗಳು, ಕೊಲೆಗಳು ನಡೆದಿಲ್ಲ.

ಬೆಳಗ್ಗೆ ಎಂಟಕ್ಕೆ ಕರೆದುಕೊಂಡ ಹಾಲು, ಮೊಸರು, ಬೆಣ್ಣೆಯನ್ನೆಲ್ಲ ಮಣ್ಣಿನ ಮಡಕೆ ಕುಡಿಕೆಗಳಲ್ಲಿ ತುಂಬಿಕೊಂಡು ಗಂಡ ಹೆಂಡತಿಯರಿಬ್ಬರೂ ತಮ್ಮ ಶಕ್ತ್ಯಾನುಸಾರ ತಲೆ ಮೇಲೆ ಹೊತ್ತುಕೊಂಡು ನಗರದ ಬೀದಿಗೆ ಕೊಂಡೊಯ್ದು ಮಾರಿ ಬರುತ್ತಿದ್ದರು. ಅದರಿಂದ ತಮ್ಮ ಜೀವನವನ್ನು ಕಟ್ಟಿಕೊಳ್ಳುತ್ತಿದ್ದರು. ಕೆಲವು ಸೋಮಾರಿಗಳು, ಮತ್ತೆ ಕೆಲವು ಶ್ರೀಮಂತ ಮನೆಯ ಹೆಂಗಸರು ತಮಗೆ ಒಲೆ ಉರಿಸಲು ಕಟ್ಟಿಗೆಯನ್ನೂ ತಂದುಕೊಡುವಂತೆ ಬೇಡಿಕೆ ಇಡುತ್ತಿದ್ದರು. ಸದಾ ಕಾಲ ಕಾದ ನೀರು ಆರದಂತೆ ಹಂಡೆ ಒಲೆ ಉರಿಯಬೇಕೆಂದರೆ ಕಡಿಮೆ ಸೌದೆ ಬೇಕೆ? ಮೇಲಾಗಿ ಅಡುಗೆ ಮಾಡಿಕೊಳ್ಳಲು ಸಹ ಸೌದೆ ಬೇಕೇಬೇಕಿತ್ತು. ಇನ್ನು ಹಸಿ ಸೌದೆಯಿಂದ ಒಲೆ ಉರಿಯುತ್ತಿರಲಿಲ್ಲವಾಗಿ ಅವುಗಳನ್ನು ಮೊದಲೇ ಕಡಿದು ತಂದು, ಸೀಳಿ, ಹಿತ್ತಲಲ್ಲಿ ಹಾಕಿ ಬಿಸಿಲಲ್ಲಿ ಒಣಗಿಸಿಕೊಂಡು ಹೊರೆ ಕಟ್ಟಿಕೊಂಡು ಹೋಗಿ ಮಾರಬೇಕಾಗುತ್ತಿತ್ತು. ಇದರ ಜೊತೆಗೆ ಕಾಳಿಂಗ ತನಗೆ ಬೇಕಾದ ಆಹಾರ ವನ್ನು ಬೆಳೆದುಕೊಳ್ಳಲೆಂದು ಒಂದಷ್ಟು ಬಯಲು ಜಾಗವನ್ನು ಹಳ್ಳದ ಪಕ್ಕದಲ್ಲಿ ಗುರುತಿಸಿಕೊಂಡಿದ್ದ. ಅಳಿದುಳಿದಿದ್ದ ಸಣ್ಣಪುಟ್ಟ ಗಿಡ ಮರಗಳನ್ನು ಕಡಿದು ಸಮತಟ್ಟು ಮಾಡಿಕೊಂಡಿದ್ದ. ವರ್ತನೆ ಮನೆಯವರ ಜತೆ ಅದೂ ಇದೂ ಕಷ್ಟಸುಖ ಮಾತಾಡುತ್ತ, ತನಗೆ ಬೇಕಾದ ಆಹಾರವನ್ನು ತಾವೇ ಬೆಳೆದುಕೊಳ್ಳುವುದಾಗಿ ಹೇಳುವಾಗ, ಅವುಗಳನ್ನು ತಮಗೂ ತಂದುಕೊಡುವಂತೆ ಬೇಡಿಕೆ ಬರುತ್ತಿತ್ತು. ಆಗ ಅನಿವಾರ್ಯವಾಗಿ ಅಷ್ಟೆಲ್ಲ ಕೆಲಸಗಳನ್ನು ಕಾಳಿಂಗ ತಾನೊಬ್ಬನೇ ಅಥವಾ ತನ್ನ ಹೆಂಡತಿಯೊಬ್ಬಳೇ ಮಾಡಲಾಗದಾದಾಗ, ಮಗನ ಹಿಂದೆ ಸಾಲಾಗಿ ಹುಟ್ಟಿದ ಒಂಭತ್ತು ಮಕ್ಕಳನ್ನೂ ಬಳಸಿಕೊಳ್ಳಲಾರಂಭಿಸಿದರು. ಈಗಿನಂತೆ ಆಗ ಮಕ್ಕಳನ್ನು ಶಾಲೆಗೆ ಕಳಿಸಿ ಓದಿಸಬೇಕೆಂಬ ಕಲ್ಪನೆಯೇ ಇರಲಿಲ್ಲ. ಆಗ ಅಮರಾವತಿಯಲ್ಲಿ ಪ್ರಾಥಮಿಕ ಶಾಲೆಯೊಂದಿತ್ತಷ್ಟೇ. ಚೆನ್ನಾಗಿ ತಿನ್ನಿಸಬೇಕು, ಉಣ್ಣಿಸಬೇಕು, ಶಕ್ತಿವಂತರನ್ನಾಗಿ ಮಾಡಿ ತಮ್ಮ ಕಾಲ ಮೇಲೆ ತಾವು ನಿಂತು ದುಡಿದು ತಿನ್ನುವಂತೆ ಮಾಡಬೇಕೆಂಬುದಷ್ಟೇ ಅವತ್ತಿನ ಉಮೇದಾಗಿತ್ತು. ಕೊನೆಯ ಮಗ ಹುಟ್ಟುವ ವೇಳೆಗಾಗಲೇ ಕಾಳಿಂಗನಿಗೆ ಐವತ್ತು ದಾಟಿಹೋಗಿತ್ತು. ಹಿರಿಯ ಮಗನಿಗಾಗಲೇ ಮದುವೆಯಾಗಿ ಅವನಿಗೂ ಮಗುವಾಗಿತ್ತು. ಎರಡೂ ತೊಟ್ಟಿಲನ್ನೂ ಒಟ್ಟಿಗೇ ಕಟ್ಟಿ ತೂಗುವಾಗ ಅವನ ಹೆಂಡತಿಗೆ ನಾಚಿಕೆಯಾಗಿ ಇನ್ನು ಮುಂದೆ ಗಂಡನ ಜೊತೆ ಮಲಗಬಾರದೆಂದು ತೀರ್ಮಾನಿಸಿದ ಮೇಲೇ ಮಕ್ಕಳಾಗುವುದು ನಿಂತಿದ್ದು.

ಯಾವಾಗ ಮಕ್ಕಳೆಲ್ಲರೂ ಒಬ್ಬೊಬ್ಬರಾಗಿ ಕೈಗೆ ಬರಲಾರಂಭಿಸಿದರೋ ಆಗ ಸ್ವಲ್ಪಸ್ವಲ್ಪವಾಗಿ ತನ್ನ ವ್ಯವಹಾರವನ್ನು ವಿಸ್ತರಿಸಿದ ಕಾಳಿಂಗ. ಒಬ್ಬನಿಗೆ ಹಾಲು ಮಾರಿಬರುವ ಕಾಯಕವಾದರೆ, ಮತ್ತೊಬ್ಬನಿಗೆ ಮೊಸರು ಮಾರುವುದು, ಇನ್ನೊಬ್ಬ ಮಗಳಿಗೆ ಬೆಣ್ಣೆ ಮಾರುವುದು, ಮತ್ತೊಬ್ಬ ಮಗನಿಗೆ ಸೌದೆ ಮಾರುವುದು ಹೀಗೆ... ಸೌದೆಯನ್ನು ತಲೆಯ ಮೇಲೆ ಹೊತ್ತು ಸಾಗಿಸುವುದು ತುಂಬ ಪ್ರಯಾಸದ ಕೆಲಸವೆಂದಾದಾಗ ಅದರ ಲಾಭದಿಂದಲೇ ಒಂದು ಗಾಡಿಯನ್ನು ಮಾಡಿಸಿದ. ಮನೆಯಲ್ಲೇ ಇದ್ದ ಎರಡು ಹೋರಿಗರುಗಳನ್ನು ರೂಢಿ ಮಾಡಿ ಗಾಡಿಗೆ ಹೂಡಿದ. ಇನ್ನೊಬ್ಬ ಮಗನನ್ನು ಜೊತೆ ಮಾಡಿ ಕಾಡಿನಿಂದ ಸೌದೆಯನ್ನು ಕಡಿದು ತಂದು ಪೇಟೆಗೊಯ್ದು ಮಾರುವ ಕೆಲಸ ಒಪ್ಪಿಸಿದ. ಅಷ್ಟರಲ್ಲಾಗಲೇ ಪಂಚವರ್ಣೆಯ ಮನೆಗಳ ಸಂಖ್ಯೆಯೂ ನೂರನ್ನು ದಾಟಿತ್ತು. ಉಳಿದವರು ಗದ್ದೆ ಕೆಲಸವನ್ನು ಮಾಡುತ್ತಿದ್ದರು. ವ್ಯವಸಾಯವೆಂದರೆ ಹಾಗೇ ಅಲ್ಲವೇ, ಮನೆಮಂದಿಯಲ್ಲ ಸಾಯುವಂಥದ್ದು. ಗದ್ದೆಯ ವಿಸ್ತೀರ್ಣ ಒಂದು, ಎರಡು ಎಕರೆಯಷ್ಟಿದ್ದದ್ದು ಹತ್ತು ಹದಿನೈದು ಎಕರೆಯನ್ನು ಮೀರಿ ವ್ಯಾಪಿಸಲಾರಂಭಿಸಿತು. ಅದರಲ್ಲೂ ಭತ್ತ ರಾಗಿ ಜೊತೆಗೆ ತರಕಾರಿಯನ್ನು ಬೆಳೆದು ನಗರಕ್ಕೆ ಸಾಗಿಸಲಾರಂಭಿಸಿದರು. ಇನ್ನೊಂದಿಬ್ಬರು ಮಕ್ಕಳಿಗೂ ಮದುವೆ ಮಾಡ ಬೇಕಾಗಿ ಬಂತು. ಸಂಸಾರ ದೊಡ್ಡದಾಯಿತು. ಬಂದ ಮೂವರು ಅಳಿಯಂದಿರಲ್ಲಿ ಇಬ್ಬರು ಇಲ್ಲಿಯೇ ಹೊಂದಿಕೊಂಡುಬಿಟ್ಟರು...

ಆಗ ತಾನಿರುವ ಮನೆ ಚಿಕ್ಕದೆನ್ನಿಸಲಾರಂಭಿಸಿತು. ಹೇಗೂ ವಿಶಾಲವಾದ ಕಾಡಿದೆ, ಮರ ಕಡಿದು ತರಲು ಮಕ್ಕಳಿದ್ದಾರೆ ಎಂದು ಭಾವಿಸಿ ಒಬ್ಬೊಬ್ಬರಿಗೆ ಒಂದೊಂದು ಕೋಣೆ ಬರುವಂತೆ, ಮೇಲೊಂದು ಅಟ್ಟ ಬರುವಂತೆ ವಿಂಗಡಿಸಿ ಮನೆ ಕಟ್ಟಲು ಒಂದು ಶುಭ ಶುಕ್ರವಾರ ಪಾಯಕ್ಕೆ ಪೂಜೆ ಮಾಡಿಯೇಬಿಟ್ಟರು. (ಸಶೇಷ)